**ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ**

**ಹುಕ್ಕೇರಿ**

**ಸಿಸಿ ನಂ ಃ 2152/2024**

**ಸಿಡಬ್ಲ್ಯು ಃ 1**

**ಪಿಡಬ್ಲ್ಯು ಃ 1**

**ಹೆಸರು** ಃ ಮೀನಾಕ್ಷಿ ಭೀಮಪ್ಪ ಸಜಲಿ

**ವಯಾ** ಃ 45 ವರ್ಷ

**ಉದ್ಯೋಗ** ಃ ಒಕ್ಕಲುತನ

**ವಾಸ** ಃ ಚೀಲಭಾಂವಿ ತಾಃ ಹುಕ್ಕೇರಿ

**(ದಿನಾಂಕಃ 29-12-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು)**

**ಮುಖ್ಯ ವಿಚಾರಣೆ : ಸಸಅಃರವರಿಂದ ಸರಕಾರದ ಪರವಾಗಿ**

ಚಾಸ 6 ಹರೀಶ ನನ್ನ ಮಗ. ನನ್ನ ಮಗಳ ಬಾಣಂತಣ ಆಗಿತ್ತು. ನನ್ನ ಮಗ ಹಿಡಕಲ ಡ್ಯಾಂ ಗೆ ಔಷದಿ ತರಲು ಹೋಗಿದ್ದ. ಸುಮಾರು ಒಂದು ವರ್ಷದ ಹಿಂದೆ ಅಕ್ಟೋಬರ ತಿಂಗಳ ಮಂಗಳವಾರ ದಿಃ 22-10-2024 ಸಂಜೆ 6 ಗಂಟೆಗೆ ನನ್ನ ಮಗ ಹರೀಶ ಮೊಟಾರ ಸೈಕಲ ತೆಗೆದುಕೊಂಡು ಹಿಡಕಲ್ ಡ್ಯಾಂ ಗೆ ಹೋಗಿದ್ದ. ಆಗ ಆರೋಪಿತರು ಉಸುಕಿನ ಟಿಪ್ಪರ ಗಾಡಿಯನ್ನು ನನ್ನ ಮಗನ ಮೇಲೆ ಹಾಯಿಸಲು ಬಂದರು ಆಗ ನನ್ನ ಮಗ ಏಕೆ ಎಂದು ಕೇಳಿದಾಗ ನನ್ನ ಮಗನಿಗೆ ಆರೋಪಿತರೆಲ್ಲರೂ ಸೇರಿ ಹೊಡೆಯುತ್ತಿದ್ದರು. ಆಗ ನಾನು ಮತ್ತು ನನ್ನ ಸಣ್ಣ ಮಗ ವಿನಾಯಕ ಕೂಡಿ ಅಲ್ಲಿಗೆ ಹೋದೆವು. ಆಗ ಆರೋಪಿತರೆಲ್ಲರೂ ಸೇರಿ ನನ್ನ ಮಗನಿಗೆ ಬಡಿಗೆ ಯಿಂದ ಹೊಡೆಯುತ್ತಿದ್ದರು. ಆರೋಪಿತರು ನನ್ನ ಮಗನಿಗೆ ರಾಡ ಮತ್ತು ಬಡಿಗೆಯಿಂದ ಹೊಡೆದರು. ಬಾಳೇಶ ಕಬ್ಬಿಣದ ರಾಡನಿಂದ ನನ್ನ ಮಗನ ಎಡಗಾಲ ಮೇಲೆ ಹೊಡೆದರು. ಉಳಿದ ನಾಲ್ಕು ಜನ ಕಟ್ಟಿಗೆಯಿಂದ ನನ್ನ ಮಗನಿಗೆ ಹೊಡೆದರು. ಶೆಟ್ಟೆಪ್ಪ ಬಡಿಗೆಯಿಂದ ಹೊಡೆದ. ಸಾಗರ ನನ್ನ ಮಗನನ್ನು ಗಟ್ಟಿಯಾಗಿ ಹಿಡಿದುಕೊಂಡು. ಚೇತನ ನನ್ನ ಮಗನಿಗೆ ಬಲಗಣ್ಣಿಗೆ ಕಲ್ಲಿಂದ ಹೊಡೆದ. ಆಗ ನಾನು ಮತ್ತು ನನ್ನಮಗ ವಿನಾಯಕ ಬಿಡಿಸಲು ಹೋದೆವು. ವಿನಾಯಕನಿಗೂ

ಸಹ  ಸಾಗರ ಮತ್ತು ಲಕ್ಕಪ್ಪ ಹೊಡೆದರು. ಶೆಟ್ಟೆಪ್ಪ ಬಡಿಗೆಯಿಂದ ವಿನಾಯಕನಿಗೆ ಹೊಡೆದರು. ಸಾಗರ ವಿನಾಯಕನನ್ನು ಎತ್ತಿ ಒಗೆದನು.

**ಮುಂದುವರೆದ ಮುಖ್ಯವಿಚಾರಣೆ ಃ ಸರಕಾರಿ ವಕೀಲರು ಮುಂದುವರೆದ ಮುಖ್ಯವಿಚಾರಣೆಗೆ ಸಮಯ ಕೊರಿದ್ದರಿಂದ ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

( ಆದಿತ್ಯ ಆರ್ ಕಲಾಲ್ )
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**